**ಶಿರಸಿಯ ಎಮ್.ಇ.ಎಸ್.ಆರ್.ಎನ್.ಶೆಟ್ಟಿ ಪಾಲೆಟೆಕ್ನಿಕ್‌ನಲ್ಲಿ ಕಾರ್ಯಕ್ರಮ**

**ಜ್ಞಾನ–ಕೌಶಲ್ಯವನ್ನು ಕಾರ್ಯಗತಗೊಳಿಸದಲ್ಲಿ ಮಾತ್ರ ಸಾಧನೆಯ ಉತ್ತುಂಗಕ್ಕೆ ಏರಲು ಸಾಧ್ಯ –ಶ್ರೀ ರಾಮು ಕಿಣಿ.**

ಇಂದಿನ ಸ್ಪರ್ದಾತ್ಮಕ ಯುಗದಲ್ಲಿ , ವಿದ್ಯಾರ್ಥಿಗಳು ಉತ್ತಮ ಉದ್ಯೋಗ ಅವಕಾಶಕ್ಕಾಗಿ , ವೃತ್ತಿಶಿಕ್ಷಣ ಆಧಾರಿತ ಕೋರ್ಸಗಳನ್ನು ಆಯ್ದು ಕೊಳ್ಳುವುದರ ಜೊತೆಗೆ , ತಮ್ಮ ಜ್ಞಾನ–ಕೌಶಲ್ಯವನ್ನು ಸಕಾಲದಲ್ಲಿ ಕಾರ್ಯಗತಗೊಳಿಸದಾಗ ಮಾತ್ರ , ಸಾಧನೆಯ ಉತ್ತುಂಗಕ್ಕೆ ಏರಲು ಸಾಧ್ಯ ಎಂದು, ಸಮಾಜ ಸೇವಕರು, ಪ್ರಗತಿಪರ ಕೃಷಿಕರು, ಉದ್ಯಮಿಗಳು ಆದ ಶ್ರೀ ರಾಮು ಕಿಣಿಯವರು ಹೇಳಿದರು.



ಶ್ರೀಯತರು ಎಮ್.ಇ.ಎಸ್.ಆರ್.ಎನ್.ಶೆಟ್ಟಿ ಪಾಲೆಟೆಕ್ನಿಕ್‌ನಲ್ಲಿ ಪ್ರಥಮ ವರುಷದ ವಿದ್ಯಾರ್ಥಿಗಳಿಗೆ ದಿನಾಂಕ ೧೫–೦೭–೨೦೨೩ರಂದು  ಏರ್ಪಡಿಸಿದ ಇಂಡಕ್ಷನ್ ಕಾರ್ಯಕ್ರಮದಡಿ ಮಾತನಾಡುತ್ತ, ಇಂದು ನಮ್ಮ ದೇಶ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ್ಲಲ್ಲಿ  ಹಲವಾರು ಸಾಧನೆಗಳನ್ನು ಮಾಡಿದ್ದು, ಇವಕ್ಕೆಲ್ಲಾ ಉತ್ತಮ ಜ್ಞಾನ, ಕೌಶಲ್ಯವನ್ನು ಹೊಂದಿದ ನಮ್ಮ ದೇಶದ ವಿಜ್ಞಾನಿಗಳ/ತಂತ್ರಜ್ಞಾನಿಗಳ ಒಂದು ತಂಡ ಕಾರಣವೆನ್ನುವುದು ತುಂಬಾ ಅಭಿಮಾನದ ಸಂಗತಿ ಎಂದು ಅಭಿಪ್ರಾಯಪಟ್ಟರು. ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೋದ ಸಾಧನೆಗಳನ್ನು ಚಂದ್ರಯಾನ–೩ರ ಉದಾಹರಣೆಯೊಂದಿಗೆ, ಮತ್ತು ಇಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಅಟೋಮೊಬೈಲ್, ರಕ್ಷಣಾ ಉಪಕರಣಗಳ ತಯಾರಿಕೆಯಲ್ಲಿ, ಹಾಗು ಮೂಲಭೂತ ಸೌಕರ್ಯಗಳ, ಹೆದ್ದಾರಿಗಳ ನಿರ್ಮಾಣದಲ್ಲಿ ಅಳವಡಿಸಿರುವ ಉನ್ನತ ತಂತ್ರಜ್ಞಾನದಿಂದ, ದೇಶದ ಅಭಿವೃದ್ಧಿ ಯಾವ ವೇಗದಲ್ಲಿ ಸಾಗುತ್ತಿದೆ, ಎಂಬುದನ್ನು ಅಂಕೆ–ಸಂಖ್ಯೆಗಳ ಸಮೇತ  ತಿಳಿಸಿದರು. ಹಾಗಾಗಿ ಹೆಚ್ಚಿನ ಬೇಡಿಕೆ ಇರುವ ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶ  ಪಡೆಯಲು ಆಸಕ್ತರಿರುವ  ಮಹತ್ವಾಕಾಂಕ್ಷಿ ವಿದ್ಯಾರ್ಥಿಗಳಿಗೆ , ಉತ್ತಮ ಸಾಧಕರನ್ನು ಪರಿಚಯಿಸಿರುವ ಖ್ಯಾತ ಸಂಸ್ಥೆಯಾದ ಎಮ್.ಇ.ಎಸ್.ಆರ್.ಎನ್.ಶೆಟ್ಟಿ ಪಾಲೆಟೆಕ್ನಿಕ್, ಶಿರಸಿಯಲ್ಲಿ, ಅವಕಾಶ ಸಿಕ್ಕಿರುವುದು, ಒಂದು ಸಂತೋಷದ ವಿಷಯ ಎಂದು ಅಭಿಪ್ರಾಯಪಡುತ್ತ , ವಿದ್ಯಾರ್ಥಿಗಳನ್ನು ಹೂ–ಗುಚ್ಛ ನೀಡಿ ಸ್ವಾಗತಿಸಿ–ಅಭಿನಂದಿಸಿದರು. ಅಲ್ಲದೇ, ಇನ್ನೂ ಹಲವರಿಗೆ ಈ ತರಹದ ಅವಕಾಶ ಸಿಗಲಿ ಎಂದು ಕರೆ ನೀಡಿದರು.

ಪ್ರಾಚಾರ್ಯರಾದ ಶ್ರೀ ಎಮ್. ಆರ್ ಶೆಟ್ಟಿ ಯವರು ಸಂಪನ್ಮೂಲ ವ್ಯಕ್ತಿಗಳಾದ ಕಿಣಿಯವರನ್ನು  ಹೂ–ಗುಚ್ಛ ನೀಡಿ ಸ್ವಾಗತಿಸಿದರಲ್ಲದೇ, ಸದರಿಯವರು ನಮಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿರುವುದು ನಮ್ಮೆಲ್ಲರ ಸುದೈವ ಅಂತ ಹೇಳಿದರು, ಇಲೆಕ್ಟ್ರಿಕಲ್ ವಿಭಾಗ ಮುಖ್ಯಸ್ಥರಾದ ಶ್ರೀ ಜಗನ್ನಾಥರವರು,  ಕಿಣಿಯವರನ್ನು ಪರಿಚಯಸಿದ್ದಲ್ಲದೇ, ಶ್ರೀಯತರ **"ಎಸ್. ಎಸ್. ಎಲ್. ಸಿ. ನಂತರ ಮುಂದೇನು ?"** ಎಂಬ ಮಾರ್ಗದರ್ಶನದಿಂದ ಉತ್ತೇಜಿತರಾಗಿ, ಡಿಪ್ಲೋಮಾ ಇಂಜನಿಯರಿಂಗ್ ಶಿಕ್ಷಣ ಪಡೆದು, ಸಾಧನೆ ಮಾಡಿದ ಹಲವರನ್ನು ಜ್ಞಾಪಿಸಿದರು. ಎಲ್ಲ ಸಾಧನೆಗಳಿಗೂ ಶಿಕ್ಷಣ ಸಂಸ್ಥೆ / ಗುರುಗಳ ಪಾತ್ರ ಅತೀಮುಖ್ಯವಾಗಿದ್ದು, ಸದರಿ ವೃಂದಕ್ಕೆ, ಗುರು–ಹಿರಿಯರಿಗೆ, ಯಾವತ್ತೂ ಗೌರವಿಸಬೇಕೆಂಬುದನ್ನು , ಇವತ್ತಿನ ವಿದ್ಯಾಥಿಗಳಿಗೆ ಮನಗಾಣಿಸಲು , ಶ್ರೀಯತ ರಾಮು ಕಿಣಿಯವರು, ಪ್ರಾಚಾರ್ಯರಾದ ಶ್ರೀ ಎಮ್. ಆರ್ ಶೆಟ್ಟಿ ಯವರನ್ನು ಶಾಲು ಹೊದಿಸಿ ಸನ್ಮಾನಿಸಿದರಲ್ಲದೇ, ವಿದ್ಯಾರ್ಥಿಗಳಿಂದ ಗುರು–ವಂದನೆಯನ್ನು ಏರ್ಪಡಿಸಿ, ಒಂದು ಉತ್ತಮ ಸಂಪ್ರದಾಯಕ್ಕೆ ನಾಂದಿ ಹಾಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ಮೆಕ್ಯಾನಿಕಲ್ ವಿಭಾಗದ ಉಪನ್ಯಾಸಕರಾದ ಶ್ರೀ ಎಸ್. ಟಿ. ಹೆಗಡೆಯವರು ಕಾರ್ಯಕ್ರಮವನ್ನು ನಿರ್ವಹಿಸುತ್ತಾ, ಬಸವನ ಹಿಂದೆ ಬಾಲ ಎಷ್ಟು ಸತ್ಯವೋ, ಅದೇ ರೀತಿ ವಿದ್ಯಾರ್ಥಿಗಳು ಸಾಧನೆ ಮಾಡಬೇಕಾದರೆ, ಪ್ರಾಮಾಣಿಕ ಪ್ರಯತ್ನವೂ ಅಷ್ಟೇ ಅವಶ್ಯಕ, ಸತ್ಯವಾದ ವಿಷಯವೆಂದು , ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.